MARCH 09, 2026

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು:**

<><><>

- **'ಕ್ವಾಂಟಮ್ ರೋಡ್‌ಮ್ಯಾಪ್';** ಬೆಂಗಳೂರಿನ ಹೆಸರಘಟ್ಟದಲ್ಲಿ, ಕ್ವಾಂಟಮ್ ಸಿಟಿ ನಿರ್ಮಾಣ.
- **"ಸಬ್ ಕಾ ಸಾತ್;** ಸಬ್ ಕಾ ವಿಕಾಸ್; ಕೇಂದ್ರದಿಂದ, ಆರೇಂಜ್ ಇಕಾನಮಿ ಕುರಿತ, ಮಹತ್ವದ ವೆಬಿನಾರ್, ಇಂದು.
- **ಈ ತಿಂಗಳ 14ನೇ ತಾರೀಖಿನ ವರೆಗೆ,** ವಿಶ್ವ ಗ್ಲುಕೋಮಾ ಜಾಗೃತಿ ಸಪ್ತಾಹ.
- **ಟಿ 20 ವಿಶ್ವಕಪ್ ಕ್ರಿಕೆಟ್;** ಸತತ ಎರಡನೇ ಬಾರಿಗೆ, ಭಾರತ ಕ್ರಿಕೆಟ್ ತಂಡ, ವಿಶ್ವ ಚಾಂಪಿಯನ್.

<><><>

**ಈಗ ವಾರ್ತೆಗಳ ವಿವರ**

<><><>

**'ಕ್ವಾಂಟಮ್ ರೋಡ್‌ಮ್ಯಾಪ್'ನ ಅನುಷ್ಠಾನಕ್ಕೆ,** 10 ಕೋಟಿ ರೂಪಾಯಿ, ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ, ಮುಖ್ಯಮಂತ್ರಿಯವರು ಘೋಷಿಸಿರುವುದು, ಕರ್ನಾಟಕವನ್ನು ಕ್ವಾಂಟಮ್ ಕ್ಷೇತ್ರದ, ಕೇಂದ್ರವನ್ನಾಗಿಸುವ, ಪ್ರಮುಖ ಹೆಜ್ಜೆಯಾಗಿದೆ ಎಂದು, ವಿಜ್ಞಾನ ಮತ್ತು ತಂತ್ರಜ್ಞಾನ ಖಾತೆ ಸಚಿವ, ಎನ್.ಎಸ್.ಬೋಸರಾಜು, ಹೇಳಿದ್ದಾರೆ. ಬೆಂಗಳೂರು 'ಕ್ವಾಂಟಮ್ ಶೃಂಗಸಭೆ' ಯಲ್ಲಿ, ಕ್ವಾಂಟಮ್ ತಂತ್ರಜ್ಞಾನ ಕ್ಷೇತ್ರವನ್ನು ಅಭಿವೃದ್ಧಿಪಡಿಸಲು, ಸಾವಿರ ಕೋಟಿ ರೂಪಾಯಿ ಹೂಡಿಕೆ ಮಾಡುವುದಾಗಿ, ಮುಖ್ಯಮಂತ್ರಿ ಭರವಸೆ ನೀಡಿದ್ದರು. 2035 ರ ವೇಳೆಗೆ, ಶೇಕಡ 20 ರ ್ಟ ಜಾಗತಿಕ ಮಾರುಕಟ್ಟೆ ಪಾಲನ್ನು ಸಾಧಿಸಲು, ರಾಜ್ಯ ಸರ್ಕಾರ, ಯೋಜಿಸಿದೆ ಎಂದರು. ಬೆಂಗಳೂರಿನ ಹೆಸರಘಟ್ಟದಲ್ಲಿ, ಕ್ವಾಂಟಮ್ ಸಿಟಿ ನಿರ್ಮಿಸಲು, ಸ್ಥಳ ಗುರುತಿಸಿ, ಅಭಿವೃದ್ಧಿ ಪಡಿಸಲಾಗುತ್ತಿದೆ. 233 ಕೋಟಿ ರೂಪಾಯಿ ವೆಚ್ಚದಲ್ಲಿ, ಬೆಂಗಳೂರಿನ ಆದಿನಾರಾಯಣ ಹೊಸಹಳ್ಳಿಯಲ್ಲಿ, 'ವಿಜ್ಞಾನ ನಗರ' ಸ್ಥಾಪನೆಗೆ, ಕೇಂದ್ರಕ್ಕೆ ವಿಸ್ತೃತ ಯೋಜನಾ ವರದಿ ಸಲ್ಲಿಸಲಾಗಿದೆ..

<><><>

**ವಿಜಯನಗರ, ಬಳ್ಳಾರಿ, ಚಿತ್ರದುರ್ಗ,** ಯಾದಗಿರಿ, ಕೊಪ್ಪಳ ಮತ್ತು ಬೀದರ್‌ನಲ್ಲಿ 24 ಕೋಟಿ ರೂಪಾಯಿ ವೆಚ್ಚದಲ್ಲಿ, 6 ನೂತನ ತಾರಾಲಯಗಳನ್ನು ನಿರ್ಮಿಸಲು ಅನುದಾನ ಒದಗಿಸಲಾಗಿದೆ ಎಂದು, ಎನ್.ಎಸ್. ಬೋಸರಾಜು ತಿಳಿಸಿದ್ದಾರೆ.

<><><>

**ಪ್ರಧಾನಮಂತ್ರಿ ಸೂರ್ಯ ಘರ್ ಯೋಜನೆ,** ಬೆಂಗಳೂರಿನಲ್ಲಿ ಅನುಷ್ಠಾನಕ್ಕಾಗಿ, ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ ಹಾಗೂ ವಸತಿ ಸಮುಚ್ಚಯಗಳ ಸಂಘದ ಪದಾಧಿಕಾರಿಗಳು, ಬೆಸ್ಕಾಂ ಜೊತೆ ಕೈಜೋಡಿಸಿ, ಯೋಜನೆಯನ್ನು ಯಶಸ್ವಿ ಗೊಳಿಸಲು ಸಹಕರಿಸಬೇಕು ಎಂದು, ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಎನ್. ಶಿವಶಂಕರ ಮನವಿ ಮಾಡಿದ್ದಾರೆ. ಬೆಸ್ಕಾಂ ನಿಗಮ ಕಚೇರಿಯಲ್ಲಿ, ವಿವಿಧ ಬಡಾವಣೆಗಳ, ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳೊಂದಿಗೆ ಅವರು ಚರ್ಚಿಸಿದರು. ಮೇಲ್ಛಾವಣಿ ಸೌರ ವಿದ್ಯುತ್ ಉತ್ಪಾದನೆಯನ್ನು ಉತ್ತೇಜಿಸಲು, ಗ್ರಾಹಕರು ಮೇಲ್ಛಾವಣಿ ಸೌರ ಘಟಕಗಳನ್ನು ಅಳವಡಿಸಿಕೊಳ್ಳಲು, ಅಗತ್ಯ ಸಹಾಯವನ್ನು ಬೆಸ್ಕಾಂ ನೀಡಲಿದೆ. ಪಿ.ಎಮ್. ಸೂರ್ಯ ಘರ್ ಯೋಜನೆಯಡಿ, ಬೆಸ್ಕಾಂ ವ್ಯಾಪ್ತಿಯಲ್ಲಿ, ಈಗಾಗಲೇ ಒಟ್ಟು 4 ದಶಾಂಶ 8–7 ಮೆಗಾವಾಟ್ ಸಾಮರ್ಥ್ಯದ ಮೇಲ್ಛಾವಣಿ ಸೌರ ವಿದ್ಯುತ್ ಘಟಕಗಳು ಅಳವಡಿಕೆಯಾಗಿದ್ದು, ಇದು ವರೆಗೆ 137 ಅರ್ಜಿಗಳು ಬಂದಿವೆ ಎಂದು, ಅವರು ತಿಳಿಸಿದರು.

<><><>

**ಕೇಂದ್ರ ಸರ್ಕಾರ, "ಸಬ್ ಕಾ ಸಾತ್;** ಸಬ್ ಕಾ ವಿಕಾಸ್; ಜನರ ಆಕಾಂಕ್ಷೆಗಳ ಈಡೇರಿಕೆ" ಎಂಬ ಶೀರ್ಷಿಕೆಯಡಿ, ಬಜೆಟ್ ನಂತರದ, ಮಹತ್ವದ ವೆಬಿನಾರ್ ಅನ್ನು, ಇಂದು ಬೆಳಗ್ಗೆ 10 ಗಂಟೆಗೆ, ಆನ್ಲೈನ್ ವೇದಿಕೆಯಲ್ಲಿ, ವರ್ಚುವಲ್ ಆಗಿ, ಆಯೋಜಿಸಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ, ಪ್ರಧಾನ ಭಾ ಣ ಮಾಡಲಿದ್ದು, ಸಂಜೆ 5 ಗಂಟೆ 45 ನಿಮಿಷದ ವರೆಗೆ, ವೆಬಿನಾರ್ ನಡೆಯಲಿದೆ.

<><><>

**ಈ ಕುರಿತು ಒಂದು ವರದಿ..**

<><><>

***2026–27ರ ಕೇಂದ್ರ ಬಜೆಟ್‌ನಲ್ಲಿ ಘೋಷಿಸಿದಂತೆ, ದೇಶಾದ್ಯಂತ 15 ಸಾವಿರ ಶಾಲೆಗಳು ಮತ್ತು 500 ಕಾಲೇಜುಗಳಲ್ಲಿ, ಎ.ವಿ.ಸಿ.ಜಿ. ಎನಿಮೇ 'ಸ್, ವಿಶ್ಯುವಲ್ ಇಫೆಕ್ಟ್ಸ್, ಗೇಮಿಂಗ್ ಮತ್ತು ಕಾಮಿಕ್ಸ್, ಕಂಟೆಂಟ್ ಕ್ರಿಯೇಟರ್ ಲ್ಯಾಬ್‌ಗಳನ್ನು ಸ್ಥಾಪಿಸಲು ಸರ್ಕಾರ ಮುಂದಾಗಿದೆ. ಔಪಚಾರಿಕ ಶಿಕ್ಷಣ ವ್ಯವಸ್ಥೆಯಲ್ಲಿ, ಸೃಜನಶೀಲ ಮತ್ತು ಡಿಜಿಟಲ್ ಕೌಶಲ್ಯಗಳನ್ನು ಅಳವಡಿಸುವುದು, ಮತ್ತು ಭಾರತದ "ಆರೆಂಜ್ ಇಕಾನಮಿ"ಯನ್ನು ಬಲಪಡಿಸುವುದು ಮುಖ್ಯ ಉದ್ದೇಶವಾಗಿದೆ. ಈ ಯೋಜನೆಯ ರಾಷ್ಟ್ರ ಮಟ್ಟದ ಅನುಷ್ಠಾನಕ್ಕೆ, ಐ.ಐ.ಸಿ.ಟಿ. ನೋಡಲ್ ಏಜೆನ್ಸಿಯಾಗಿ ಕಾರ್ಯನಿರ್ವಹಿಸಲಿದೆ. ಮಾಹಿತಿ ಮತ್ತು ಪ್ರಸಾರ ಸಚಿವಾಲಯ, ಉನ್ನತ ಶಿಕ್ಷಣ ಇಲಾಖೆ ಮತ್ತು ನೀತಿ ಆಯೋಗದ ಸಮನ್ವಯದೊಂದಿಗೆ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಈ ಡಿಜಿಟಲ್ ಕ್ರಾಂತಿಯ ಪ್ರಯೋಜನವನ್ನು ಪಡೆಯಲು ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳು, ಕಾಲೇಜುಗಳು ಮತ್ತು ಶಾಲಾ ಶಿಕ್ಷಣ ಸಂಸ್ಥೆಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ರಾಜ್ಯ ಸರ್ಕಾರಗಳಿಗೆ ಮಾಹಿತಿ ನೀಡಲಾಗಿದೆ ಎಂದು, ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವಾಲಯದ ಕಾರ್ಯದರ್ಶಿ ಸಂಜಯ್ ಜಾಜು, ತಿಳಿಸಿದ್ದಾರೆ.***

<><><>

**ವಿವೇಕ ಧ್ವನಿ 60 ಸೆಕೆಂಡುಗಳು**

<><><>

**ಪ್ರಸಕ್ತ ಆಯವ್ಯಯದಲ್ಲಿ,** 'ಮಿಲೆಟ್ ಹಬ್' ಸ್ಥಾಪನೆಗೆ, ಮುಖ್ಯಮಂತ್ರಿಯವರು ಪ್ರಾವಧಾನ ಕಲ್ಪಿಸಿದ್ದು, ಕಲಬುರಗಿಗೆ ಆದ್ಯತೆ ನೀಡುವಂತೆ, ಪ್ರಸ್ತಾವ ಸಿದ್ಧ ಪಡಿಸಿ, ಕೃಷಿ ಇಲಾಖೆ ಮೂಲಕ, ಜಿಲ್ಲಾಡಳಿತ ಸಲ್ಲಿಸಲಿದೆ ಎಂದು, ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ ಖರ್ಗೆ, ಎಕ್ಸ್ ಮಾಧ್ಯಮದಲ್ಲಿ ತಿಳಿಸಿದ್ದಾರೆ. ಸಿರಿಧಾನ್ಯ ಶಕ್ತಿ ಪರಿಚಯಿಸಲು, ಕಲಬುರಗಿ ರೊಟ್ಟಿಗೆ ಬ್ರ್ಯಾಂಡ್ ದೊರಕಿಸಿದಂತೆ, ಪವಾಡ ಧಾನ್ಯಗಳ ಮಾರುಕಟ್ಟೆಗೆ, ಡಿಜಿಟಲ್ ವೇದಿಕೆ ಕಲ್ಪಿಸಿ, ರೈತರು ನೇರವಾಗಿ ಗ್ರಾಹಕರೊಂದಿಗೆ ಸಂಪರ್ಕಿಸಿ, ಸುಸ್ಥಿರ ಸಿರಿಧಾನ್ಯಗಳ ಬಳಕೆಯನ್ನು, ಪ್ರೋತ್ಸಾಹಿಸುವ ಉದ್ದೇಶ ಹೊಂದಲಾಗಿದೆ ಎಂದಿದ್ದಾರೆ.

<><><>

**ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..**

**(40 ಸೆಕೆಂದುಗಳು)**

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆ ಹಿನ್ನೆಲೆ,** ವಿದ್ಯಾರ್ಥಿಗಳಲ್ಲಿ ಪರೀಕ್ಷಾ ಭಯ ನಿವಾರಿಸಿ,ಆತ್ಮಸ್ಥೈರ್ಯ ತುಂಬಲು, ರಾಜ್ಯ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ, ಸಹಾಯವಾಣಿ ಆರಂಭಿಸಿದೆ. ಈ ತಿಂಗಳ 15ನೇ ತಾರೀಖಿನ ವರೆಗೆ, ನಿತ್ಯ ಸಂಜೆ 4 ಗಂಟೆಯಿಂದ, ರಾತ್ರಿ 8 ಗಂಟೆಯ ವರೆಗೆ, ಭಾನುವಾರ ಬೆಳಗ್ಗೆ 11 ಗಂಟೆಯಿಂದ, ಸಂಜೆ 5ರ ವರೆಗೆ ಸಹಾಯವಾಣಿ ಕಾರ್ಯನಿರ್ವಹಿಸಲಿದೆ.

<><><>

**ಆಸಕ್ತ ವಿದ್ಯಾರ್ಥಿಗಳು ಹಾಗೂ ಪೋ ’ಕರು,** ದೂರವಾಣಿ ಸಂಖ್ಯೆ 080 – 23310075 ಅಥವಾ 080– 23310076 ಸಂಪರ್ಕಿಸಬಹುದು.

<><><>

**ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನದ,** ಧಾರವಾಡ ಜಿಲ್ಲೆಯ, ಸಹಾಯಕ ಯೋಜನಾ ಸಮನ್ವಯ ಅಧಿಕಾರಿ, ರೇಣುಕಾ ಅಮಲಝರಿ, ವಿಶೇಷ ಆಪ್ತಸಮಾಲೋಚನಾ ಸಹಾಯವಾಣಿ ಕುರಿತು, ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ.

<><><>

**ಡಾ. ರೇಣುಕಾ ಅಮಲಝರಿ ಧ್ವನಿ 55 ಸೆಕೆಂದುಗಳು**

<><><>

**ಭಾರತವೊಂದರಲ್ಲೇ, 12 ಮಿಲಿಯನ್** ಜನ ಗ್ಲುಕೋಮಾ ಕಾಯಿಲೆಯಿಂದ ಪೀಡಿತರಾಗಿದ್ದಾರೆ. ದೃಷ್ಟಿ ದೋ ’ ಪತ್ತೆ ಹಚ್ಚಲು ಮತ್ತು ತಡೆಗಟ್ಟಲು, 40 ವ ’೯ ವಯಸ್ಸಿನ ನಂತರ, ನಿಯಮಿತವಾಗಿ ಕಣ್ಣಿನ ತಪಾಸಣೆ ಮಾಡಿಸಿಕೊಳ್ಳುವುದು, ಮುಖ್ಯ ಎಂದು, ಬೆಂಗಳೂರಿನ ನಾರಾಯಣ ನೇತ್ರಾಲಯದ, ನಿರ್ದೇಶಕ ನರೇನ್ ಶೆಟ್ಟಿ ತಿಳಿಸಿದ್ದಾರೆ. ಗ್ಲುಕೋಮಾವನ್ನು, "ದೃಷ್ಟಿಯ ನಿಶಬ್ದ ಕಳ್ಳ"

ಎಂದು ಪರಿಗಣಿಸಲಾಗಿದೆ. ಈ ತಿಂಗಳ 8ನೇ ತಾರೀಖಿನಿಂದ 14ರ ವರೆಗೆ, ವಿಶ್ವ ಗ್ಲುಕೋಮಾ ಜಾಗೃತಿ ವಾರ ಆಚರಿಸಲಾಗುತ್ತಿದೆ ಎಂದರು.

<><><>

**ಕೇಂದ್ರ ಪುರಸ್ಕೃತ, ಎಚ್.ಪಿ.ವಿ. ಲಸಿಕೆ ಅಭಿಯಾನ,** ರಾಜ್ಯಾದ್ಯಂತ ಮೂರು ತಿಂಗಳುಗಳ ಕಾಲ ನಡೆಯಲಿದೆ. ಪೋ ‘ಕರ ಒಪ್ಪಿಗೆಯ ಮೇರೆಗೆ, ಲಸಿಕೆ ನೀಡಲು, ಯೋಜಿಸಲಾಗಿದೆ. ‘ಹ್ಯೂಮನ್ ಪ್ಯಾಪಿಲೋಮ ವೈರಸ್ ಲಸಿಕೆ’ ಮಾರುಕಟ್ಟೆಯಲ್ಲಿ, 10 ಸಾವಿರ ರೂಪಾಯಿ ದರ ಹೊಂದಿದ್ದು, ಕೇಂದ್ರ ಸರ್ಕಾರ, ಉಚಿತವಾಗಿ, ಬಳ್ಳಾರಿ ಜಿಲ್ಲೆಯ 14 ವರ್ಷದ 20 ಸಾವಿರ ಬಾಲಕಿಯರಿಗೆ, ಈ ತಿಂಗಳ 11ನೇ ತಾರೀಖಿನಿಂದ, ಲಸಿಕೆ ಹಾಕಲಿದೆ, ಎಂದು, ಜಿಲ್ಲಾಧಿಕಾರಿ ಕೆ.ನಾಗೇಂದ್ರಪ್ರಸಾದ ತಿಳಿಸಿದ್ದಾರೆ.

<><><>

**2026ರ ಐ.ಸಿ.ಸಿ., ‘ಟಿ 20 ವಿಶ್ವಕಪ್ ಕ್ರಿಕೆಟ್’,** 10ನೇ ಆವೃತ್ತಿಯ, ಅಂತಿಮ ಪಂದ್ಯದಲ್ಲಿ, ನ್ಯೂಝಿಲ್ಯಾಂಡ್ ತಂಡದ ವಿರುದ್ಧ, 96 ರನ್‌ಗಳ ಅಂತರದಿಂದ ಗೆಲುವು ಸಾಧಿಸಿ, ಎರಡನೇ ಬಾರಿಗೆ, ಭಾರತ ಕ್ರಿಕೆಟ್ ತಂಡ, ವಿಶ್ವ ಚಾಂಪಿಯನ್ ಪಟ್ಟ ಅಲಂಕರಿಸಿತು. ಅಹಮದಾಬಾದಿನ, ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆದ, ಫೈನಲ್ ಪಂದ್ಯದಲ್ಲಿ, ಭಾರತ ತಂಡ, 20 ಓವರ್‌ಗಳಲ್ಲಿ, 5 ಹುದ್ದರಿಗಳ ನಷ್ಟದೊಂದಿಗೆ, 255 ರನ್ ಗಳಿಸಿತು. ಇದನ್ನು ಬೆನ್ನತ್ತಿದ ನ್ಯೂಝಿಲ್ಯಾಂಡ್ ತಂಡ, 19 ಓವರುಗಳಲ್ಲಿ ತನ್ನೆಲ್ಲ ಹುದ್ದರಿಗಳನ್ನು ಕಳೆದುಕೊಂಡು, ಕೇವಲ 159 ರನ್ ಗಳಿಸಿ, ಪರಾಭವಗೊಂಡಿತು.

<><><>

**ಬಾಲರ್ ಜಸ್‌ಪ್ರೀತ ಬುಮ್ರಾ,**4 ಓವರುಗಳಲ್ಲಿ15 ರನ್ ನೀಡಿ, 4 ವಿಕೆಟ್ ಕಬಳಿಸಿದ, ಪಂದ್ಯ ಶ್ರೇಷ್ಠ ಪ್ರಶಸ್ತಿ ಪಡೆದರು.

<><><>

**ಬ್ಯಾಟ್ಸ್‌ಮನ್ ಸಂಜು ಸ್ಯಾಮ್ಸನ್, 5 ಪಂದ್ಯಗಳಲ್ಲಿ,** ಸತತ 3 ಅರ್ಧ ಶತಕಗಳೊಂದಿಗೆ, 321 ರನ್ ದಾಖಲಿಸಿ, ಟಿ 20 ಸರಣಿ ಶ್ರೇಷ್ಠ ಪುರಸ್ಕಾರಕ್ಕೆ, ಭಾಜನರಾದರು.

<><><>

**ಪ್ರಧಾನಮಂತ್ರಿ ನರೇಂದ್ರ ಮೋದಿ,** ಮುಖ್ಯಮಂತ್ರಿ ಸಿದ್ದರಾಮಯ್ಯ, ಚಾಂಪಿಯನ್ ಭಾರತ ಕ್ರಿಕೆಟ್ ತಂಡವನ್ನು, ಅಭಿನಂದಿಸಿದ್ದಾರೆ.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- **‘ಕ್ವಾಂಟಮ್ ರೋಡ್‌ಮ್ಯಾಪ್’;** ಬೆಂಗಳೂರಿನ ಹೆಸರಘಟ್ಟದಲ್ಲಿ, ಕ್ವಾಂಟಮ್ ಸಿಟಿ ನಿರ್ಮಾಣ.
- **“ಸಬ್ ಕಾ ಸಾತ್;** ಸಬ್ ಕಾ ವಿಕಾಸ್; ಕೇಂದ್ರದಿಂದ, ಆರೇಂಜ್ ಇಕಾನಮಿ ಕುರಿತ, ಮಹತ್ವದ ವೆಬಿನಾರ್, ಇಂದು.
- **ಈ ತಿಂಗಳ 14ನೇ ತಾರೀಖಿನ ವರೆಗೆ,** ವಿಶ್ವ ಗ್ಲುಕೋಮಾ ಜಾಗೃತಿ ಸಪ್ತಾಹ.
- **ಟಿ 20 ವಿಶ್ವಕಪ್ ಕ್ರಿಕೆಟ್;** ಸತತ ಎರಡನೇ ಬಾರಿಗೆ, ಭಾರತ ಕ್ರಿಕೆಟ್ ತಂಡ ಚಾಂಪಿಯನ್.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>